

ಕ್ರೋಶಿಯಾದ ಬೀದಿಯೊಂದರಲ್ಲಿ ಚಿತ್ರ ಕಲಾವಿದ

ವ್ಯಾಟಿಕನ್‌ನ ಬೀದಿಯಲ್ಲಿ ಕೊಳಲು ವಾದಕ



ದೇಹ ಬಿಸಿಲಲ್ಲಿ ಸುಟ್ಟು ಕಪ್ಪಾಗಿರುತ್ತದೆ. ಬಟ್ಟೆ ಮಲಿನವಾಗಿರುತ್ತದೆ. ಅವರು ಕಲೆಯ ಮೂಲಕ ಸೆಳೆಯುವುಕ್ಕಿಂತ ಮಿಗಿಲಾಗಿ ದೈನ್ಯದಿಂದ ಮರುಕವನ್ನು ಉದ್ದೀಪಿಸಿ, ದಾನವನ್ನು ಪಡೆಯುವರು. ಧಾರ್ಮಿಕ ಸ್ಪರ್ಶವಿರುವ ಬೀದಿಕಲೆಗಳು ಜನತಾ ಪೋಷಣೆಯಿದ್ದ ಕಾಲದಲ್ಲಿ ದೈನೇಸಿಯಾಗಿರಲಿಲ್ಲ. ಆಧುನಿಕ ಮನರಂಜನಾ ಮಾಧ್ಯಮಗಳು ಬಂದ ಬಳಿಕ ತಮ್ಮ ಪಾರಂಪರಿಕ ಗೌರವ ಕಳೆದುಕೊಂಡು ಬೇಡುವ ಸಾಧನವಾದವು. ಆದರೆ ಯೂರೋಪಿನಲ್ಲಿ ಕಲಾವಿದರು ತಮ್ಮ ಸೃಜನಶೀಲತೆಯಿಂದ ರಸಿಕರನ್ನು ಬೆರಗುಗೊಳಿಸಿ ಘನತೆಯಿಂದ ಸಂಭಾವನೆ ಗಳಿಸುವರು. ಪಾರಂಪರಿಕ ಕಲೆಗಳನ್ನು ಪ್ರವಾಸೋದ್ಯಮದ ಭಾಗವಾಗಿ ಬೆಳೆಸುವ ಕಲೆಯೂ ಅಲ್ಲಿ ಚೆನ್ನಾಗಿ ಸಿದ್ಧಿಸಿದೆ.

ಕ್ರೋಶಿಯಾದಲ್ಲಿ ಧಾರ್ಮಿಕ ಬೀದಿಕಲಾವಿದರ ಒಂದು ತಂಡವು ಭೇಟಿಯಾಯಿತು. ಅಲ್ಲಿನ ಸ್ಪ್ಲಿಟ್ ಶಹರದಲ್ಲಿ ಒಂದು ಪ್ರಾಚೀನ ಅರಮನೆಯಿದೆ. ಅಲ್ಲಿ ಛಾವಣಿಯಿಲ್ಲದೆ, ಆಗಸ ಕಾಣುವ ಅದ್ಭುತವಾದ ಶಿಲಾಕೆತ್ತನೆಯಿರುವ ರಾಣಿಯ ಅಂತಃಪುರವಿದೆ. ಪ್ರವಾಸಿಗರು ಈ ಖೋಲಿಯನ್ನು ಹೊಕ್ಕೊಡನೆ ಕಪ್ಪುಸೂಟು ಧರಿಸಿದ ಒಂದು ತಂಡ ಹಾಡತೊಡಗುವುದು. ಕ್ರಿಸ್ತನ ಮಹಿಮೆಯ ಗೀತೆಗಳ ಇಂಪಾದ ಹಾಡಿಕೆ. ಅವರು ಪ್ರವಾಸಿಗರಿಂದ ಸಂಭಾವನೆ ಸ್ವೀಕರಿಸಲಿಲ್ಲ. ತಮ್ಮ ಹಾಡಿಕೆಯ ಆಲ್ಬಮ್ ಖರೀದಿಸಲು ವಿನಂತಿಸಿದರು. ಧರ್ಮಪ್ರಸಾರ, ಮನರಂಜನೆ, ಸಂಸ್ಕೃತಿವಿಶಿಷ್ಟ ಕಲೆಯ ಪರಿಚಯ, ವ್ಯಾಪಾರ, ಎಲ್ಲವೂ ಮರ್ಯಾದೆಯಲ್ಲಿ ಮಿಳಿತವಾಗಿತ್ತು ಅಲ್ಲಿ.

ನಮ್ಮ ದರ್ಗಾಮಸೀದಿ, ಗುಡಿಚರ್ಚುಗಳ ಬಳಿ ಇರುವಂತೆ ಯೂರೋಪಿನ ಚರ್ಚುಗಳ ಮುಂದೆ ಭಿಕ್ಷುಕರು ಹೆಚ್ಚು ಕಾಣಲಿಲ್ಲ. ಅಲ್ಲಿ ಭಿಕ್ಷೆ ಅಪರಾಧವೆಂಬ, ರಾಷ್ಟ್ರೀಯ ಲಜ್ಜೆಯೆಂಬ ಭಾವವಿದೆ. ಆದರೂ ಕೆಲವೇ ಭಿಕ್ಷುಕರು ಕಂಡರು. ನಮ್ಮ ವಸತಿಯಿದ್ದ ಮ್ಯೂನಿಕ್ ನಗರದ ಬ್ರೆಕ್ಸ್ಟ್ ಬಡಾವಣೆಯಲ್ಲಿ, ನಾಯಪರ್ಲಾಕ್ ಮೆಟ್ರೊ ನಿಲ್ದಾಣಕ್ಕೆ ಹೋಗುವ ಹಾದಿಯಲ್ಲಿ, ಒಬ್ಬ ಭಿಕ್ಷುಕ ಎದುರಾಗುತ್ತಿದ್ದನು. ಹ್ಯಾಟನ್ನು ಮುಂದಿರಿಸಿಕೊಂಡು ಕೂತಿರುತ್ತಿದ್ದ ಆತ ಹಾದಿಹೋಕರ ಮುಖನೋಡಿ ಸ್ನೇಹಭಾವದಲ್ಲಿ ಮುಗುಳು ನಗುತ್ತ 'ಹಲೋ' ಎನ್ನುತ್ತಿದ್ದನು. ಜರ್ಮನಿಗೆ ಹೋಲಿಸಿದರೆ ವ್ಯಾಟಿಕನ್ನಿನಲ್ಲಿ ಹೆಚ್ಚು ಭಿಕ್ಷುಕರಿದ್ದರು. ಇದಕ್ಕೆ ಕಾರಣ ಹದಗೆಟ್ಟಿರುವ ಇಟಲಿಯ ಆರ್ಥಿಕತೆಯೊ ಧಾರ್ಮಿಕ ಯಾತ್ರಾಸ್ಥಳಗಳಲ್ಲಿ ಇದು ಅನಿವಾರ್ಯವೊ ತಿಳಿಯದು. ಕ್ರಿಸ್ತನ ಕರುಣೆಯನ್ನು ನಮಗೂ ತುಸು ಹಣಿಸಿ ಎಂಬ ಭಾವದಲ್ಲಿ, ನೆಲಕ್ಕೆ ಹಣೆಹತ್ತಿಸಿ ಮೊಣಕಾಲ ಮೇಲೆ ಕೂತಿರುತ್ತಿದ್ದರು. ದಾನಿಗಳು ಹ್ಯಾಟಿನಲ್ಲಿ ರೊಕ್ಕ ಹಾಕುತ್ತಿದ್ದರು.

ಯೂರೋಪಿನ ಸಾರ್ವಜನಿಕ ವಾಹನಗಳಲ್ಲಿ ಬೀದಿ ಕಲಾವಿದರು ಕಾಣಲಿಲ್ಲ. ಅದು ಪಯಣಿಕರ ಅಪ್ಪಟ ಖಾಸಗಿ ಸಮಯ. ಯಾರೂ ಯಾರ ನೆಮ್ಮದಿಯನ್ನು ಕೆಡಿಸುವಂತಿಲ್ಲ. ಯೂರೋಪಿನ ಕಲಾವಿದರನ್ನು ಕಂಡಾಗ ಕಲೆಯ ಹಂಗಿಲ್ಲದೆ ಅಂಗವಿಕಲತೆ, ಬಡತನ, ಧಾರ್ಮಿಕತೆ ತೋರಿ ಬದುಕುವ ದೊಡ್ಡ ಪ್ರಮಾಣದಲ್ಲಿ ಭಿಕ್ಷುಕರನ್ನು ನಾವು ಸೃಷ್ಟಿಸಿದ್ದೇವೆಯೇ ಎಂಬ ಪ್ರಶ್ನೆ ನನ್ನೊಳಗೆ ಸುಳಿಯಿತು. ನಮ್ಮ ಧಾರ್ಮಿಕ ಕ್ಷೇತ್ರಗಳಲ್ಲಿ ಭಿಕ್ಷಕುರು ತಮ್ಮ ಆರ್ತಸ್ವರಗಳಿಂದ ಕರುಣೆ ಉಕ್ಕಿಸುವರು. ಇದಕ್ಕೆ ಕಾರಣ ಬಡತನ ಮಾತ್ರವಲ್ಲ; ಭಿಕ್ಷೆ ಬೇಡುವುದು ಸ್ವಾಭಿಮಾನಕ್ಕೆ ತಕ್ಕುದಲ್ಲ ಎಂಬ ಪ್ರಜ್ಞೆ ಇಲ್ಲದಿರುವುದು. ಭಿಕ್ಷೆ ಕೊಡುವುದು ಧಾರ್ಮಿಕವಾಗಿ ಪುಣ್ಯಕಾರ್ಯವೆಂಬ ಭಾವ ನಮ್ಮಲ್ಲೂ ಇರುವುದು. ದಾನವನ್ನು ಧಾರ್ಮಿಕ ಸೇವೆಯಾಗಿಸಿದ ಸಮಾಜಗಳು, ಸಂಪತ್ತಿನ ಸಮಾನ ಹಂಚಿಕೆಯಲ್ಲಾಗಿರುವ ದೋಷವನ್ನು ಮರೆತುಬಿಡುತ್ತವೆ. ಕಲಾವಿದರು ತಮ್ಮಿಷ್ಟಕ್ಕೆ ಹಾಡುತ್ತ ಹೋದಾಗ ಸಿಗುವ ನೆಮ್ಮದಿ, ಅವರು ಕೈಯೊಡ್ಡಿದೊಡನೆ ಕಲೆಯ ಕಲಾತ್ಮಕತೆ ಊನಗೊಳ್ಳುತ್ತದೆ. ಕೇದಾರದಲ್ಲಿ ಜೋಗಿಯೊಬ್ಬ ತನ್ನಷ್ಟಕ್ಕೆ ತಾನು ತನ್ಮಯವಾಗಿ ಬೇಡು ಭಾವವಿಲ್ಲದೆ ಹಾಡಿದ್ದು ನೆನಪಿಗೆ ಬರುತ್ತದೆ. ಜೆರುಸಲೇಮಿನ ಮಾತೆ ಮೇರಿಯ ಚರ್ಚಿನಲ್ಲಿ, ಒಬ್ಬ ಗಾಯಕಿ ಎಲ್ಲರೂ ಮೌನವಾಗಿ ಪ್ರಾರ್ಥನೆ ಸಲ್ಲಿಸುತ್ತಿರುವಾಗ, ಇದ್ದಕ್ಕಿದ್ದಂತೆ ಉಚ್ಚವಾದ ಗಂಭೀರವಾದ ಇನಿದಾದ ಸ್ವರದಲ್ಲಿ ಹಾಡಿದ್ದು ಕೂಡ ನೆನಪಾಗುತ್ತಿದೆ. ಆಕೆ ಆಗಷ್ಟೇ ಶಿಲುಬೆಯಿಂದ ಇಳಿಸಿದ ಏಸುವಿನ ದೇಹವನ್ನು ಮಡಿಲಲ್ಲಿಟ್ಟು ಹಾಡುತ್ತಿರುವ ಮೇರಿಯಂತೆ, ತನ್ನ ಹೃದಯದಾಳದಿಂದ ಹಾಡಿದಳು. ನಿಶ್ಶಬ್ದವಾದ ವಾತಾವರಣದಲ್ಲಿ ಆಕೆಯ ದನಿ ಕೇಳುಗರ ಧಮನಿಗಳಲ್ಲಿ ಹಾದು, ಮಾತೆ ಮೇರಿಯ ಶೋಕಭರಿತ ವಾತ್ಸಲ್ಯಭಾವವನ್ನು ತುಂಬಿಬಿಟ್ಟಿತು. ಕಣ್ಣು ತೇವವಾದವು. ಆಧ್ಯಾತ್ಮಿಕ ಅನುಭವವು ಕಲೆಯ ಮೂಲಕ ತೀವ್ರವಾಗಿ ಹೊಮ್ಮುತ್ತದೆ. ಈ ಅನುಭವ ಕೊಡಬಲ್ಲ ಬೀದಿಕಲಾವಿದರು ಈಗಲೂ ಇದ್ದಾರೆ. ಅವರು ಕೇವಲ ಹೊಟ್ಟೆಪಾಡಿಗಾಗಿ ಹಾಡುವವರಲ್ಲ.

ಬೀದಿಕಲಾವಿದರ ಬಗ್ಗೆ ಯೂರೋಪಿನಲ್ಲಿ ಬಹಳ ಆದರವಿದೆ. ಅವರು ಅಲ್ಲಿನ ಕತೆ ಕಾವ್ಯದ ಚಿತ್ರಕಲೆ ಮತ್ತು ಸಿನಿಮಾಗಳ ವಸ್ತುವಾಗಿದ್ದಾರೆ. ನಮ್ಮಲ್ಲೂ 'ಸ್ಟ್ರೀಟ್‌ಸಿಂಗರ್', 'ಮೇರಾನಾಮ್ ಜೋಕರ್' ಮುಂತಾದ ಸಿನಿಮಾ ಬಂದವು. ಖುರ್ರತುಲೈನ್ ಹೈದರ್ 'ಲಖ್ನೋದ ಬೀದಿಗಾಯಕರು' ಎಂಬ ಕತೆ ಬರೆದರು. ಬಹುತೇಕ ಸಿನಿಮಾ, ಕತೆ, ಕಾದಂಬರಿಗಳು ಕಾಣಿಸುವ ಸತ್ಯವೆಂದರೆ, ಬೀದಿಕಲೆಯು ಆಧುನಿಕ ನಾಟಕ, ಸಿನಿಮಾ ಮತ್ತು ಸಂಗೀತ ಕಛೇರಿಗೆ ಮೇಲ್ಚಲನೆ ಪಡೆಯುತ್ತದೆ. ಅದೇ ಕಾಲಕ್ಕೆ ಕಲಾವಿದರಲ್ಲಿ ಮೊದಲಿದ್ದ ನಮ್ರತೆ, ಮಾನವೀಯತೆ ಕಳೆದುಹೋಗಿ, ಬಾಂಧವ್ಯಗಳು ವ್ಯವಹಾರಿಕವಾಗಿ ಅವರ ವ್ಯಕ್ತಿತ್ವ ಪತನಗೊಳ್ಳುತ್ತದೆ. ಕಲೆಯ ಜತೆ ಬಡತನ, ಧಾರ್ಮಿಕತೆ, ಸೃಜನಶೀಲತೆ ಮತ್ತು ವ್ಯವಹಾರಗಳು ಮೇಳವಿಸಿರುವ ಈ ಬಗೆ ಎಷ್ಟೊಂದು ಜಟಿಲ?

**ಪ್ರತಿಕ್ರಿಯಿಸಿ: feedback@sudha.co.in**

ಚಿತ್ರಗಳು ಲೇಖಕರವು